ಸತ್ಯಂ ಶಿವಂ ಸುಂದರಂ

'ಸತ್ಯಂ ಶಿವಂ ಸುಂದರಂ' ಎಂದು ಶಿವನ ಮಹಿಮೆ ಇದೆ. ಸತ್ಯದ ಬಗ್ಗೆ ಹೇಳಲು ಸಾಕಷ್ಟು ಇದೆ. ಸತ್ಯಕ್ಕೆ ಸಾವು ಇಲ್ಲ. ಏಕೆಂದರೆ ಸತ್ಯ ಶಬ್ದವು ಸತ್ ಅರ್ಥಾತ ನಶ್ವರ, ಶಾಶ್ವತ. ಪ್ರಕೃತಿ, ಪುರುಷ, ಪರಮಾತ್ಮ ಈ ಮೂರು ಅನಾದಿ, ಅವಿನಾಶಿ. ಪ್ರಕೃತಿ ತನ್ನ ರೂಪವನ್ನು ಬದಲಾಯಿಸಿದರೆ, ಪುರುಷ ಮತ್ತು ಪರಮಾತ್ಮನು ಸೃಷ್ಟಿ ನಾಟಕದಲ್ಲಿ ಪಾತ್ರ ಹಾಗು ಸೂತ್ರಧಾರಿಗಳಾಗಿದ್ದಾರೆ.

ಸತ್ಯ ಯಾವಾಗಲು ಸತ್ಯವಾಗಿರುವುದು. ಸತ್ಯಕ್ಕೆ ವಿಜಯ ಖಚಿತವಾಗಿರುವುದರಿಂದ 'ಸತ್ಯಮೆವ ಜಯತೆ' ಎಂದು ಹೇಳುತ್ತಾರೆ. ಸತ್ಯ ಜೀವನದ ಶೈಲಿ. ಸತ್ಯದ ಪಥದ ಮೇಲೆ ನಡೆಯುವನು ಚರಿತ್ರವಂತನು. ಸತ್ಯ ಕಲ್ಯಾಣಕಾರಿಯಾಗಿದೆ. ಸತ್ಯದ ಸಾಧನೆ, ಆರಾಧನೆ, ತಪಸ್ಸು ಮಾಡುವನು ವಂದನೀಯ, ಪೂಜ್ಯನೀಯ, ಪ್ರಶಂಸನೀಯನಾಗಿರುತ್ತಾನೆ. ಸತ್ಯದ ಪೂಜಾರಿ ಸರ್ವರ ಪ್ರಿಯ ಸರ್ವರಸ್ನೇಹಿ ಇರುತ್ತಾನೆ. ಜನರು ಅವನನ್ನು ಸಜ್ಜನ, ಮಹಾತ್ಮ, ಮಹಾನ ಪುರುಷ ಎಂದು ಕರೆಯುತ್ತಾರೆ. ಸತ್ಯದ ಶಕ್ತಿ ಮಹಾನವಾಗಿದೆ. ಜೀವನದ ಬಿರುಗಾಳಿಯಲ್ಲಿ ಸತ್ಯದ ಡೋಣಿ ಅಲಗಾಡಿದರು ಮುಳುಗಿ ಹೊಗುವದಿಲ್ಲ. ಏಕೆಂದರೆ ಸತ್ಯದ ಜೊತೆ ಸ್ವಯಂ ಭಗವಂತನಿದ್ದಾನೆ. ಸತ್ಯವು ಶುದ್ಧ ಚಿನ್ನದ ಸಮಾನವಾಗಿರುದರಿಂದ, ಎಲ್ಲರನ್ನು ಆಕರ್ಷಿಸುತ್ತದೆ. ಸತ್ಯವು ಸೂರ್ಯನ ಸಮಾನ ವಾಗಿರುವದರಿಂದ ಅದರ ಹೊಳಪು, ಪ್ರಖರತೆ ಎಂದಿಗೂ ಕಡಿಮೆ ಆಗುವದಿಲ್ಲ. ಸತ್ಯಕ್ಕೆ ಪ್ರಮಾಣ ನೀಡುವ ಅವಶ್ಯಕತೆ ಇಲ್ಲ. ಸತ್ಯ ವರದಾನವಾಗಿದೆ. ಸತ್ಯ ದಿವ್ಯ ಗುಣಗಳ ಆಧಾರ. ಸತ್ಯದ ಜೊತೆಗೆ ಮಧುರತೆ, ನಮ್ರತೆ, ಆತ್ಮವಿಶ್ವಾಸ, ಮಂತಾದ ಗುಣಗಳು ತಾವಾಗಿ ಬಂದು ಬಿಡುವವು. ಸತ್ಯವನ್ನು ಧಾರಣೆ ಮಾಡಿಕೊಂಡವನು ಸದಾ ನಿರ್ಭಯ, ನಿಶ್ಚಿಂತ, ಸಾಹಸಿ ಹಾಗು ದೃಢ ನಾಗಿರುವನು.

ತನ್ನನು ತಾನು ತಿಳಿದುಕೊಳ್ಳುವುದೆ ಮೊದಲನೆಯ ಸತ್ಯ. ನಾನು ಶರೀರ ಅಲ್ಲ, ಆತ್ಮ. ಶರೀರ ವಿನಾಶಿ, ಆತ್ಮ ಅನಾದಿ ಅವಿನಾಶಿ. ಶರೀರ ಒಂದು ವಸ್ತ್ರ ವಾದರೆ, ಅದನ್ನು ಧರಿಸಿ ಪಾತ್ರವನ್ನು ಮಾಡುವ ನಾನು ಆತ್ಮ ಪಾತ್ರಧಾರಿ. ನಾನು ಚೈತನ್ಯ , ಮನ, ಬುದ್ಧಿ ಸಂಸ್ಕಾರ ಗಳಿಂದ ಕೂಡಿರುವ ಅತಿ ಸೂಕ್ಷ್ಮ ಶಕ್ತಿ, ಆತ್ಮ. ಶರೀರ ಚೈತನ್ಯ ಮಂದಿರ, ಆತ್ಮ ಅದರಲ್ಲಿ ಸ್ಥಾಪಿತವಾದ ಸುಂದರ ಮೂರ್ತಿ. ದೇಹದ ಪಂಚೇಂದ್ರಿಯಗಳ ರಥದ ಮೇಲೆ ನಾನು ಆತ್ಮ ಸಾರಥಿ. ಅತ್ಮ ಈ ಸೃಷ್ಟಿ ನಾಟಕದಲ್ಲಿ ಶರೀರ ವನ್ನು ಧರಿಸಿ ಪಾತ್ರವನ್ನು ಅಭಿನಯಸುತ್ತದೆ. ಪುಣ್ಯ ಕರ್ಮಗಳನ್ನು ಮಾಡಿದಾಗ ಪುಣ್ಯಾತ್ಮ, ಪಾಪಗಳನ್ನು ಮಾಡಿದಾಗ ಪಾಪಾತ್ಮ, ಮಹಾನ ಕಾರ್ಯವನ್ನು ಮಾಡಿದಾಗ ಮಹಾತ್ಮ, ದೇವತೆಯ ಸಮಾನ ಇದ್ದಾಗ ದೇವಾತ್ಮನಾಗತ್ತದೆ. ಮೋದಲನೆಯ ಸತ್ಯವನ್ನು ತಿಳಿದರೇ, ಎರಡನೆಯ ಸತ್ಯ, 'ಸತ್ಯಂ ಶಿವಂ ಸುದರಂ' ನಾಗಿರುವ ಪರಮಾತ್ಮನನ್ನು ತಿಳಿದುಕೊಳ್ಳುವದು ಬಹಳ ಸಹಜ. ಹಿಂದಿ ಭಾಷೆಯಲ್ಲಿ 'ಖುದ ಕೊ ಜಾನೊ ತೊ, ಖುದಾ ಕೊ ಜಾನ ಸಕೆಂಗೆ' ಎಂದು ಹೇಳಲಾಗಿದೆ. ಸರ್ವ ಆತ್ಮಗಳ ಪಿತ ಜ್ಯೋತಿಸ್ವರೂಪ, ನಿರಾಕಾರಿ, ನಿರ್ವಿಕಾರಿ, ನಿರಹಂಕಾರಿ, ಅತಿ ಸೂಕ್ಷ್ಮ, ಅನಾದಿ, ಅವಿನಾಶಿ, ಸ್ವಯಂಭು ಶಿವ ಪರಮಾತ್ಮ. ಆತ್ಮ ಪಾಪ-ಪುಣ್ಯದಲ್ಲಿ ಬುರುವದರಿಂದ ಪಾಪಾತ್ಮ, ಪುಣ್ಯಾತ್ಮನಾಗುತ್ತದೆ. ಆದರೆ ಪರಮಾತ್ಮನು ಸದಾಶಿವನು, ಸರ್ವಶ್ರೇಷ್ಠನು, ಸರ್ವಶಕ್ತಿವಂತನು. ಅವನೇ ಸರ್ವ ಆತ್ಮರ ತಂದೆ, ಅವನೇ ಅಲ್ಲಾ, ಅವನೇ ಈಶ, ಅವನೇ ಗಾಡ್, ಓಂಕಾರನು, ದೇವನೊಬ್ಬ, ನಾಮ ಹಲವು. ಬ್ರಹ್ಮ, ವಿಷ್ಣು, ಬಸವ, ಏಸು, ನಾನಕ ಪೈಗಂಬರರೆಲ್ಲ ಒಬ್ಬ ನಿರಾಕಾರ ಪರಮಾತ್ಮನ ಮಕ್ಕಳು.

ಭಗವಂತನಿಗೆ ಸತ ಗುರು, ಸತನಾಮ, ಸತ್‌ಶಿಕ್ಷಕ, 'ಸತ್ಯಂ ಶಿವಂ ಸುಂದರಂ', ಸತ್ ಚಿತ್ ಆನಂದ ಸ್ವರೂಪನು, ಎಂದು ಮಹಿಮೆ ಮಾಡಲಾಗುತ್ತದೆ. ಪರಮಾತ್ಮ ಸತ್ಯನು, ಸತ್ಯಜ್ಞಾನದಾತನು, ಸತ್ಯಯುಗದ ಸ್ಥಾಪನೆ ಮಾಡುವವನು, ಸೃಷ್ಟಿಯ ಆದಿ ಮಧ್ಯ ಅಂತ್ಯದ ಸತ್ಯ ಕಥೆ ಹೇಳುವವನು. ಮೂರನೆಯ ಸತ್ಯ ಪ್ರಕೃತಿ. ಅದಕ್ಕೆ ಶಾಶ್ವತವಾದ ರೂಪ ಇಲ್ಲ. ಅದು ಪರಿವರ್ತನಶೀಲವಾಗಿದೆ. ಒಂದು ಸಮಯಕ್ಕೆ ಅದು ಸ್ವರ್ಗವಾದರೆ, ಇನ್ನೊಂದು ಕಾಲಕ್ಕೆ ಅದು ನರಕದ ಸಮಾನವಾಗುತ್ತದೆ. ಸೃಷ್ಟಿಯ ನಾಟಕದಲ್ಲಿ ಪಾತ್ರಧಾರಿ ಆಗಿರುವ ಆತ್ಮದ ಸ್ಥಿತಿ,ಗತಿಯ ಮೇಲೆ ಪ್ರಕೃತಿ ಅವಲಂಬಿಸಿದೆ. ಪ್ರತಿಯೊಬ್ಬನು ಪಾತ್ರಧಾರಿ ಆಗಿರುವದರಿಂದ, ಅವನ ಪಾತ್ರ ಮುಗಿದಾಗ, ನಾಟಕದ ಕೊನೆಯಲ್ಲಿ ನಾಟಕದ ಸೂತ್ರಧಾರಿ ಆಗಿರುವ ಭಗವಂತನ ಅವತರಣೆ ಆಗುತ್ತದೆ. ಭಗವಂತನು ತನ್ನ ಜೊತೆ ನಿಜವಾದ ಮನೆಗೆ ಕರೆದುಕೊಂಡು ಹೊಗುತ್ತಾನೆ. ಆದರಿಂದಲೆ 'ಅಲ್ಲಿ ಇರುವುದು ನಮ್ಮ ಮನೆ ಇಲ್ಲಿ ಬಂದಿರುವುದು ಸುಮ್ಮನೆ' ಎಂದು ಹೇಳುತ್ತಾರೆ.

ಸತ್ಯದ ಪರಿಕಲ್ಪನೆ ಅತಿ ಸೂಕ್ಷ್ಮ, ಆಳವಾಗಿರುತ್ತದೆ. ಬೇರೆ-ಬೇರೆ ಪರಿಸ್ಥಿತಿಗಳಲ್ಲಿ ಸತ್ಯದ ಪರಿಕಲ್ಪನೆ ಬೇರೆ ಆಗಿರುತ್ತದೆ. ಉದಾಹರಣೆಗೆ ಸೈನಿಕನಿಗೆ ದೇಶದ ರಕ್ಷಣೆ ಮಾಡುವುದು ಪರಮ ಧರ್ಮ. ಮನೆಗೆ ಬಂದಿರುವ ಕಳ್ಳನು ಮಾಲೀಕನಿಗೆ ತಿಜೊರಿಯ ಬೀಗ ಕೇಳಿದಾಗ ಸತ್ಯ ಹೇಳುವದು ಅವಶ್ಯಕತೆ ಇಲ್ಲ. ಆದರೇ ತನ್ನ ಸಂಪತ್ತನ್ನು ಕಾಪಾಡಿಕೊಳ್ಳುವದೇ ಸತ್ಯವಾಗಿದೆ. ಹಸುವನ್ನು ಬೆನ್ನು ಹತ್ತಿ ಕೊಲ್ಲಲು ಬಂದಿರುವ ಕಸಾಯಿಗೆ ಸುಳ್ಳು ಹೇಳಿದರೆ, ಅದು ಪಾಪ ಕರ್ಮ ಅಲ್ಲ. ಸತ್ಯವನ್ನು ತಿಳಿದುಕೊಳ್ಳಲು ಸದ್‌ವಿವೇಕದ ಅವಶ್ಯಕತೆ ಇದೆ. ವಿಜ್ಞಾನ ಮತ್ತು ಆಧ್ಯಾತ್ಮ ನಮಗೆ ಸತ್ಯದ ದಾರಿಯಲ್ಲಿ ಕರೆದುಕೊಂಡು ಹೊಗುತ್ತವೆ. ಆದರೆ ಚರ್ಮಚಕ್ಷುಗಳಿಂದ ಮಾತ್ರ ಸತ್ಯವನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಅಂತರ ಜಗತ್ತು ಬಾಹ್ಯಜಗತ್ತಿನಕಿಂತಲು ವಿಶಾಲವಾಗಿದೆ. ಅದನ್ನು ತಿಳಿಯಲು ಜ್ಞಾನದ ಚಕ್ಷು ಬೇಕು. ಸತ್ಯ ಜ್ಞಾನವನ್ನು ನೀಡುವವನು, ಜ್ಞಾನೇಶ್ವರ ಶಿವನಾಗಿದ್ದಾನೆ. ಅವನಿಗೆ ತ್ರಿನೇತ್ರಿ ಎಂದು ಹೇಳುತ್ತಾರೆ. ಶಿವನು ಕೊಡುವ ಜ್ಞಾನ ಸತ್ಯ. ಸತ್ಯವೇ ಬೆಳಕು. ಅಸತ್ಯವೇ ಕತ್ತಲು. ಈಶ್ವರೀಯ ಜ್ಞಾನ ಹಾಗೂ ರಾಜಯೋಗದ ನಿರಂತರ ಅಭ್ಯಾಸದಿಂದ ಬುದ್ಧಿ ದಿವ್ಯವಾಗುವದು. ದಿವ್ಯ ಬುದ್ಧಿಯಿಂದ ಸತ್ಯ-ಅಸತ್ಯದ ನಿರ್ಣಯ ತೆಗೆದುಕೊಳ್ಳ ಬಹುದು. ಬನ್ನಿ ನಾವೆಲ್ಲ ಆ 'ಸತ್ಯಂ ಶಿವಂ ಸುದರಂ' ಶಿವನ ಮಕ್ಕಳು ಎಂದು ತಿಳಿದು ನಡೆಯೋಣ ಮತ್ತು ಸತ್ಯ ಕರ್ಮದಿಂದ, ಭಾರತ ಭೂಮಿಯನ್ನು ಪುನಃ ಸ್ವರ್ಗವನ್ನಾಗಿ ಮಾಡೋಣ.

--ವಿಶ್ವಾಸ ಸೋಹೋನಿ.
ಧಾರವಾಡ.

- ब्रह्माकुमारीज् वार्ता फिचर्स

www.bkvarta.com